# ಜಿಲ್ಲಾ ನಗರಾಭಿವೃದ್ಧಿ ಕೋಶ, ಉತ್ತರ ಕನ್ನಡ, ಕಾರವಾರ – 581 301

**DISTRICT URBAN DEVELPOMENT CELL, D.C. OFFICE UTTARA KANNADA DISTRICT, KARWAR-581 301**

ದೂರವಾಣಿ : 08382 221170
Telephone: 08382 221170 (Fax)
Email: itstaffdudckarwar@gmail.com


ನಂ. ಡಿಯುಡಿಸಿ /ವಿವ/ಕರಾವಳಿ ಉತ್ಸವ/2017-18 ದಿನಾಂಕ: 02-11-2017

## ಅಲ್ಪಾವಧಿ ಟೆಂಡರ್ ಪ್ರಕಟಣೆ

### ಇ-ಪ್ರೊಕ್ಯುರ್‌ಮೆಂಟ್ ಮೂಲಕ

ಯಾವತ್ತೂ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಇತ್ಯಾದಿ ದೊಡ್ಡಮಟ್ಟದ ಕಾರ್ಯಕ್ರಮಗಳ ವೇದಿಕೆಯಲ್ಲಿ ದೀಪ, ಸೌಂಡ್ ಸಿಸ್ಟಮ್ ಅಳವಡಿಸಿ ವೇದಿಕೆ ತಯಾರಿಸಿ ಕೊಡುವವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,

ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಉತ್ಸವ – 2017 ದಿನಾಂಕ: 08, 09, 10 ನೇ ಡಿಸೆಂಬರ್ 2017 ರಂದು ರವೀಂದ್ರನಾಥ ಕಡಲ ತೀರದಲ್ಲಿ ಇರುವ ಮಯೂರವರ್ಮ ವೇದಿಕೆಯಲ್ಲಿ ಆಚರಣೆ ಮಾಡಲು ನಿರ್ಧರಿಸಲಾಗಿದೆ. ಈ ಸಂಬಂಧ ವೇದಿಕೆ ಕಾರ್ಯಕ್ರಮ ಹಾಗೂ ಸ್ಥಳೀಯ, ರಾಷ್ಟ್ರೀಯ ಮತ್ತು ಬಾಲಿವುಡ್ ತಾರೆಗಳು ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಆಗಮಿಸುವವರಿದ್ದು ಸದರ ವೇದಿಕೆ ಕಾರ್ಯಕ್ರಮಕ್ಕೆ ಬೇಕಾಗುವ ಸಾಮಗ್ರಿಗಳನ್ನು 3 ದಿನಕ್ಕೆ ಬಾಡಿಗೆ ಆಧಾರದಲ್ಲಿ ವ್ಯವಸ್ಥೆ ಮಾಡಿಕೊಡಲು ಈ ಕೆಳಗಿನ ಶರ್ತಿಗೆ ಒಳಪಟ್ಟು ಇ-ಪ್ರೊಕ್ಯುರ್‌ಮೆಂಟ್ ಮೂಲಕ ಟೆಂಡರ ಕರೆಯಲಾಗಿರುತ್ತದೆ. ಟೆಂಡರ ಸಲ್ಲಿಸುವ ಅಂತಿಮ ದಿನಾಂಕ:14-11-2017 ರಂದು 16-00 ಗಂಟೆಯೊಳಗೆ ದರವಾರವನ್ನು ಇ-ಪ್ರೊಕ್ಯೂರಮೆಂಟ್ ಮೂಲಕ ಸಲ್ಲಿಸಬಹುದಾಗಿದೆ. ಆಸಕ್ತರು ರೂ. 50,000/- ಮುಂಗಡ ಠೇವಣಿಯನ್ನು ಇ-ಪೇಮೆಂಟ್ ಮೂಲಕ ಪಾವತಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಉ.ಕ. ಕಾರವಾರ ಇವರಿಗೆ ದೂರವಾಣಿ ಸಂಖ್ಯೆ 08382-221170 ಅಥವಾ ಮೊಬೈಲ್ ನಂ. 9448120430 ಅಥವಾ ಇ-ಮೇಲ್- itstaffdudckarwar@gmail.com ಮೂಲಕ ಸಂಪರ್ಕಿಸಬಹುದಾಗಿದೆ.

**ಶರ್ತುಗಳು :-**

1) ಸ್ವೀಕೃತವಾದ ಇ-ಟೆಂಡರ್‌ಗಳನ್ನು ಹಾಜರಿದ್ದ ಟೆಂಡರ್‌ದಾರರು ಅಥವಾ ಅವರ ಅಧಿಕೃತ ಪ್ರತಿನಿಧಿಗಳ ಎದುರಿನಲ್ಲಿ ದಿನಾಂಕ: 15-11-2017 ರಂದು 17-00 ಗಂಟೆಗೆ ಜಿಲ್ಲಾಧಿಕಾರಿ ಕಚೇರಿಯಲ್ಲಿ ತೆರೆಯಲಾಗುವುದು.

2) ಟೆಂಡರ್‌ದಾರರಿಗೆ ಆದೇಶ ನೀಡಿದ 3 ದಿನದಲ್ಲಿ ಟೆಂಡರ್‌ನಲ್ಲಿ ಸೂಚಿಸಿದ ಎಲ್ಲಾ ಕಾಮಗಾರಿಗಳನ್ನು ನಿರ್ವಹಿಸಿಕೊಡತಕ್ಕದ್ದು ಹಾಗೂ ದಿನಾಂಕ: 07-12-2017 ರಂದು ಸಾಯಂಕಾಲ 8.00 ಗಂಟೆಗೆ ಪ್ರಾಯೋಗಿಕವಾಗಿ ಚಾಲನೆ ಮಾಡಿ ಸಂಬಂಧಪಟ್ಟ ವೇದಿಕೆ ಸಮಿತಿಯವರಿಗೆ ಕಡ್ಡಾಯವಾಗಿ ತೋರಿಸತಕ್ಕದ್ದು.

3) ಟೆಂಡರ್‌ದಾರರು ಯಾವತ್ತೂ ವಿದ್ಯುತ್ ವ್ಯವಸ್ಥೆ ತಮ್ಮ ಸ್ವಂತ ಖರ್ಚಿನಿಂದ ಮಾಡಿಕೊಳ್ಳುವುದು ಹಾಗೂ ಅದಕ್ಕೆ ಸಂಬಂಧಿಸಿದ ಹೆಸ್ಕಾಂ ಶುಲ್ಕವನ್ನು ಅವರೇ ಪಾವತಿಸುವುದು.

4) ಟೆಂಡರ್‌ದಾರರು ತಮ್ಮ ಸ್ವಂತ ಖರ್ಚಿನಿಂದ ಸರಬರಾಜು ಮಾಡಿದ ಎಲ್ಲಾ ಸಾಮಗ್ರಿಗಳ ಭದ್ರತೆಯನ್ನು ಮಾಡಿಕೊಳ್ಳುವುದು.

5) ಟೆಂಡರ್ ನಮೂನೆಯಲ್ಲಿ ತೋರಿಸಿದ ಸಾಮಗ್ರಿಗಳನ್ನು ಸರಬರಾಜು ಮಾಡದೇ ಇದ್ದಲ್ಲಿ ಸದ್ರಿಯವರ ಬಿಲ್ಲಿನಿಂದ ಹಣವನ್ನು ಕಡಿತ ಮಾಡಲಾಗುವುದು.

6) ಟೆಂಡರ್‌ದಾರರು ಟೆಂಡರ್ ಫಾರ್ಮನಲ್ಲಿ ಇಲ್ಲದ ಐಟಂಗಳು ಬೇಕಾದಲ್ಲಿ ಅವುಗಳನ್ನು ಸರಬರಾಜು ಮಾಡತಕ್ಕದ್ದು ಹಾಗೂ ಅದಕ್ಕೆ ಮಾರುಕಟ್ಟೆಯಲ್ಲಿ ಇರುವ ಬಾಡಿಗೆ ಆಧಾರದಲ್ಲಿ ಹೆಚ್ಚುವರಿ ಹಣವನ್ನು ಟೆಂಡರ್ ಸಮಿತಿ, ಕರಾವಳಿ ಉತ್ಸವ-2016 ಪರಿಶೀಲಿಸಿ ಪಾವತಿ ಮಾಡಲು ಶಿಫಾರಸ್ಸು ಮಾಡಲಾಗುವುದು.

7) ಈ ಟೆಂಡರ್ ಸಂಬಂಧ ಟೆಂಡರ್ ಸಮಿತಿ, ಕರಾವಳಿ ಉತ್ಸವ – 2017 ಉ.ಕ. ಕಾರವಾರ ಅಥವಾ ಜಿಲ್ಲಾಧಿಕಾರಿಗಳು ಕೈಗೊಳ್ಳುವ ಯಾವತ್ತೂ ನಿರ್ಣಯ ಅಂತಿಮವಾಗಿರುತ್ತದೆ.

8) ಈ ಹಿಂದೆ ದೊಡ್ಡಮಟ್ಟದ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ವೇದಿಕೆ ರೂಪಿಸಿದ ಬಗ್ಗೆ ದಾಖಲೆ ಪತ್ರಗಳನ್ನು ಟೆಂಡರ್ ಸಂಗಡ ನೀಡತಕ್ಕದ್ದು.

9) ಯಾವತ್ತೂ ಕೆಲಸವನ್ನು ವೇದಿಕೆ ಸಮಿತಿಯೊಂದಿಗೆ ಸಹಕರಿಸಿ ಅವರ ನಿರ್ದೇಶನವನ್ನು ಸಹ ಪಾಲಿಸತಕ್ಕದ್ದು.

10) ಟೆಂಡರ್ ಫಾರ್ಮನಲ್ಲಿ ಕಾಣಿಸಿದ ಎಲ್ಲಾ ಐಟಂಗಳಿಗೆ ದರವಾರುಗಳನ್ನು ನೀಡತಕ್ಕದ್ದು. ಎಲ್ಲಾ ಐಟಂಗಳಿಗೆ ದರವಾರು ನೀಡದೇ ಇದ್ದಲ್ಲಿ ಅಪೂರ್ಣ ಟೆಂಡರ್ ಅಂತ ಪರಿಗಣಿಸಿ ತಿರಸ್ಕರಿಸಲಾಗುವುದು.

11) ಟೆಂಡರ್‌ದಾರರು ಸಲ್ಲಿಸುವ ದರವಾರವು ಎಲ್ಲಾ ತೆರಿಗೆ ಮತ್ತು ಕರ ಸೇರಿಸಿ ನೀಡತಕ್ಕದ್ದು.

ಅಧ್ಯಕ್ಷರು, ಟೆಂಡರ್ ಸಮಿತಿ ಕರಾವಳಿ ಉತ್ಸವ –2017 ಮತ್ತು
ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ,
ಉತ್ತರ ಕನ್ನಡ, ಕಾರವಾರ